**ಒ.ಎಸ್ ನಂ.** 4291/2017
ಪಿ.ಡಬ್ಲ್ಯೂ-1

ದಿನಾಂಕ:05-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ ವಕೀಲರಿಂದ:**

ನಿಪಿ.40 ದಾಖಲೆಯನ್ನು 2013 ರಲ್ಲಿ ಬರೆಯಲಾಗಿರುತ್ತದೆ. ನಿಪಿ.40 ನ್ನು ಬೋರ್ ವೆಲ್ ಹಾಕಿಸಲು ಕೊಟ್ಟ ಅರ್ಜಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಇದ್ದ ಬೋರ್ ವೆಲ್ ಅನ್ನು ನೊಂದಾಯಿಸಲು ಕೊಟ್ಟ ಅರ್ಜಿ ಎನ್ನುತ್ತಾರೆ. ನಾನು 2009 ರಲ್ಲಿ ಬೋರ್ ವೆಲ್ ಹಾಕಿಸಲು ಪರವಾನಿಗೆ ಪಡೆದಿದ್ದೆ. ನಾನು ಈ ರೀತಿ ಪಡೆದುಕೊಂಡಿದ್ದ ಪರವಾನಿಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ, ಸಾಕ್ಷಿ ಮುಂದುವರಿದು ರಸೀದಿ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ಬೋರ್ ವೆಲ್ ಹಾಕಿಸಲು ಪರವಾನಿಗೆ ಅತ್ಯವಶ್ಯಕವಾಗಿದ್ದು ನಾನು ಪರವನಿಗೆ ಪಡೆಯದೇ ಬೋರ್ ವೆಲ್ ಹಾಕಿಸಿರುತ್ತೇನೆ ಎಂದರೆ ಸಾಕ್ಷಿ 2009 ರಲ್ಲಿ ಪರವಾನಿಗೆ ಅವಶ್ಯಕವಾಗಿರಲಿಲ್ಲ ಎನ್ನುತ್ತಾರೆ. ನಿಪಿ.40 ಮತ್ತು 41 ನ್ನು ನಾನು ದಾವಾಸ್ವತ್ತನ್ನು ಕಬಳಿಸಲು ಸೃಷ್ಟಿ ಮಾಡಿರುವ ಸುಳ್ಳು ದಾಖಲೆಗಳು ಎಂದರೆ ಸರಿಯಲ್ಲ. ನಿಪಿ.42 ದಾಖಲೆ ನನ್ನ ಕೈಕೆಳಗೆ ಬಾಡಿಗೆದಾರರಾಗಿರುವ ಮಕರೇಶ್ ವರ್ಮಾ ರವರ ಹೆಸರಿಗೆ ಇದೆ. ನಿಪಿ.42 ರಲ್ಲಿ ನನ್ನ ಹೆಸರಾಗಲಿ ಅಥವಾ ನನ್ನ ಸ್ವತ್ತಿನ ವಿವರವಾಗಲೀ ಉಲ್ಲೇಖಿಸಿಲ್ಲ ಎಂದರೆ ಸಾಕ್ಷಿ ಬಾಡಿಗೆ ಕರಾರು ಪುತ್ರದ ಆಧಾರದ ಮೇಲೆ ಬಾಡಿಗೆ ದಾರರು ಪಡೆದುಕೊಂಡಿರುತ್ತಾರೆ ಎನ್ನುತ್ತಾರೆ. ನಿಪಿ.42 ನ್ನು ಸಹ ಈ ಕೇಸಿಗಾಗಿ ಸೃಷ್ಟಿ ಮಾಡಿರುವ ಸುಳ್ಳು ದಾಖಲೆ ಎಂದರೆ ಸರಿಯಲ್ಲ. ನಿಪಿ.43 ರಲ್ಲಿ ಮುನಿರಾಮಯ್ಯ ಚೌದರಿ ಎಂದು ಬರೆದಿರುವ ಹೆಸರನ್ನು ತೆಗೆದು ಮದಿನಿ ರಾಮಯ್ಯ ಚೌದರಿ ಎಂದು ತಿದ್ದುಪಡಿ ಮಾಡಿರುತ್ತಾರೆ, ಸಾಕ್ಷಿ ಮುಂದುವರಿದು ನನ್ನ ಹೆಸರೇ ತಪ್ಪಾಗಿದ್ದ ಕಾರಣ ಅದನ್ನು ತಿದ್ದುಪಡಿ ಮಾಡಿರುತ್ತಾರೆ ಎನ್ನುತ್ತಾರೆ. ನಾನು ನಿಪಿ.43 ದಾಖಲೆಗೆ ನನ್ನ ಹೆಸರು ತಿದ್ದುಪಡಿ ಮಾಡುವಂತೆ ಅರ್ಜಿ ಕೊಟ್ಟಿದ್ದು ಸದರಿ ಅರ್ಜಿಯ ಆದೇಶದಂತೆ ತಿದ್ದುಪಡಿ ಆಗಿರುತ್ತದೆ. ನಿಪಿ.43 ದಾಖಲೆಗೆ ತಿದ್ದುಪಡಿ ಆಗುವ ಮೊದಲು ಬಿಬಿಎಂಪಿ ಇಂದ ಆದೇಶ ಮಾಡಿರುತ್ತಾರೋ ಹೇಗೋ ಗೊತ್ತಿಲ್ಲ, ಸಾಕ್ಷಿ ನನ್ನ ಹೆಸರು ತಿದ್ದುಪಡಿ ಮಾಡಿರುವುದು ಮಾತ್ರ ಸರಿ ಎನ್ನುತ್ತಾರೆ. ನಾನು ನಿಪಿ.43 ನ್ನು 2021 ರಲ್ಲಿ ಸೃಷ್ಟಿ ಮಾಡಿ ತಂದು ಹಾಜರುಪಡಿಸಿರುವ ಸುಳ್ಳು ದಾಖಲೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ಪರ ವಕೀಲರು 1 ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲನ್ನು ಅನುಕರಿಸಲು ಕೋರಿರುತ್ತಾರೆ. ಹಾಗಾಗಿ ಅನುಮತಿ ನೀಡಲಾಯಿತು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ಇಶ್ರತ್ ಜಹಾನ್ ಆರಾ)

**III ನೇ ಎ.ಸಿ.ಸಿ & ಎಸ್.ಜೆ, ಬೆಂಗಳೂರು.**